# ವಾರ್ಡ್ ನಂ: 149 ವರ್ತೂರು ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 04/12/2021 ರಂದು ವರ್ತೂರು ವಾರ್ಡ್ ಸಂಖ್ಯೆ: 149 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ಶ್ರೀ.ಶ್ರೀನಿವಾಸ್, ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಲಯ ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿ ರವರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ಅಂಶಗಳನ್ನೊಳಗೊಂಡಂತೆ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು,

1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ, ವರ್ತೂರು ಆರೋಗ್ಯ ಕೇಂದ್ರ ಮತ್ತು ಗುಂಜೂರು ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಪರೀಕ್ಷೆಗಾಗಿ 6 ತಂಡಗಳಲ್ಲಿ ವಿಂಗಡಿಸಿ ಮತ್ತು ಪಾಸಿಟಿವ್ ಬಂದಿರುವ ಕಡೆ ಕೋವಿಡ್ ಪರೀಕ್ಷೆಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಪಕವಾಗಿ ಮಾಡುವುದು, ಹಾಗೂ ಕೋವಿಡ್ ಪಾಸಿಟಿವ್ ಬಂದಿರುವ ಸುತ್ತ-ಮುತ್ತ ಪ್ರದೇಶಗಳಲ್ಲಿ ಕಂಟೈನ್‌ಮೆಂಟ್ ವಲಯ, ಸ್ಯಾನಿಟೈಸರ್ ಮತ್ತು ಔಷದಿಯನ್ನು ಸಿಂಪಡಣೆ ಕಾರ್ಯವನ್ನು ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ, ಕೋವಿಡ್ ಸಂಬಂದಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರು ಬಂದಿರುವುದಿಲ್ಲ, ಇದೆ ರೀತಿಯಾಗಿ ಕೆಲಸವನ್ನು ಮುಂದುವರೆಸಲು ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿಗಳು ತಿರ್ಮಾನಿಸಿದರು.

ಕ್ರಮ: ಸಹಾಯಕ ಅಭಿಯಂತರು/ಕಂದಾಯ ಪರಿವೀಕ್ಷಕರು/ಕಿರಿಯ/<br>ಕಿರಿಯ ಆರೋಗ್ಯ ಪರಿವೀಕ್ಷಕರು

3. ವರ್ತೂರು ವಾರ್ಡ್ ನಂ:149ರಲ್ಲಿ ಹಸಿಕಸ / ಒಣಕಸ ವಿಂಗಡನೆಯ ಕುರಿತಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಬ್ಲಾಕ್‌ನ ಅನುಸಾರ ನಿರ್ವಹಿಸಲು ಹಾಗೂ ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಹಾಗೂ ಔಷದಿ ಸಂಬಂದಿತ ಮ್ಯಾನ್ಯೂಯಲ್ ಸ್ಪ್ರೇಯಿಂಗ್, ಆಟೋ ಸ್ಪ್ರೇಯಿಂಗ್ ಫಾಗಿಂಗ್ ಕೆಲಸ ಕಾರ್ಯಗಳು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೊಗುವಂತೆ ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದರು. ಹಾಗೂ ಕಸ ವಿಂಗಡೆಯನ್ನು ಸಮಪರ್ಕವಾಗಿ ಮಾಡಲು ಸೂಚಿಸಲಾಯಿತು.

ಕ್ರಮ: ಕಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ದುರಸ್ತಿಯಾಗಿರವ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿದು, ಇದನ್ನು ಕೂಡಲೇ ಪರಿಶೀಲಿಸಿ, ದುರಸ್ತಿಗೊಳಿಸುವುದು ಹಾಗೂ ಬೀದಿ ದೀಪಗಳ ನಿರ್ವಹಣೆ ಮಾಡುವ ಸಮಯದಲ್ಲಿ ಬೇಕಾಗುವ ಸಾಮಾಗ್ರಿಗಳನ್ನು ಒದಗಿಸಲು ಗುತ್ತಿಗೆದಾರರಿಗೆ ಸೂಚಿಸಿದರು ಹಾಗೂ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಗುತ್ತಿಗೆದಾರರಿಗೆ ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದರು. ಹೊಸದಾಗಿ ಬೀದಿ ದೀಪಗಳ ಅಳವಡಿಕೆಯ ಬಗ್ಗೆ ಸಂಬಂಧಿತ ವಿದ್ಯುತ್ ವಿಭಾಗದ ಇಂಜಿನಿಯರ್‌ಗಳಿಗೆ ಸೂಚಿಸಲಾಯಿತು. ಸದರಿ ವಿಭಾಗದಿಂದ, ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವುದನ್ನು, ಗಂಭೀರವಾಗಿ ಪರಿಗಣಿಸಿ, ಮೇಲಾಧಿಕಾರಿಗಳಿಗೆ ವರದಿ ಮಾಡಲು ಸೂಚಿಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ಮತ್ತು ವಿದ್ಯುತ್ ದೀಪಗಳ ಉಸ್ತುವಾರಿ ಇಂಜಿನಿಯರ್

5. ವರ್ತೂರು ಗ್ರಾಮದ ಹೊಸದಾಗಿ ಸಂತೆ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವ ಜಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸಲು ಹಾಗೂ ಸರ್ವೆ ಮಾಡುವ ಬಗ್ಗೆ ಮತ್ತು ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಲು ಸಾರ್ವಜನಿಕರು ಸಭೆಯಲ್ಲಿ ಮನವಿ ಮಾಡಿದರು. ಅದರಂತೆ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ಮತ್ತು ವಾರ್ಡ್ ಅಭಿಯಂತರರರಿಗೆ ಸೂಚಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ,/ವಾರ್ಡ್ ಅಭಿಯಂತರರು ವೈಟ್‌ಫೀಲ್ಡ್ ಉಪವಿಬಾಗ

6. ವರ್ತೂರು ವ್ಯಾಪ್ತಿಯಲ್ಲಿ ಬಿ.ಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಆಗೆದಿರುವ ರಸ್ತೆಯನ್ನು ಸರಿಯಾಗಿ ಮುಚ್ಚದೇ ಮಣ್ಣನ್ನು ರಸ್ತೆಯಲ್ಲಿ ಬಿಟ್ಟು ಸಾರ್ವಜನಿಕರಿಗೆ ತೊಂದರೇಯಾಗುತ್ತಿರುವುದಾಗಿ ಕೋರಿ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ಅಂದರೆ ಅನುಮೋದನೆಗೊಂಡ ಅಂದಾಜುಪಟ್ಟಿಯಂತೆ ರಿಸ್ಟೋರೇಷನ್ ಮಾಡಲು ಸಹಾಯಕ ಅಭಿಯಂತರರು, ಬಿ.ಡ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಕಾವೇರಪ್ಪ ಬಡಾವಣೆ, ಗುಂಜೂರು ಪಾಳ್ಯ, ಪಣತ್ತೂರು, ಬಳಗೆರೆ, ಗುಂಜೂರು ಗ್ರಾಮ, ಮಧುರಾನಗರ ಇಲ್ಲಿ ಒಳಚರಂಡಿಗಾಗಿ ಅಗೆದಿರುವ ರಸ್ತೆಗಳನ್ನು ಯಥಾಸಿಸ್ಥಿಗೆ ತರಲು ಹಾಗೂ ಪ್ರಕಾಶ್ ಬಡಾವಣೆ, ಬಿ.ಸಿ.ಎಂ. ಬಡಾವಣೆ-ವರ್ತೂರು, ಧರ್ಮರಾಯಸ್ವಾಮಿ ದೇವಸ್ಥಾನದ ರಸ್ತೆ, ಇಂದಿರಾ ಕ್ಯಾಂಟೀನ್ ರಸ್ತೆ, ಹಾಲು ಬಾವಿ ರಸ್ತೆ, ಬಾಕಿ ಇರುವ ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಚರ್ಚಿಸಲಾಯಿತು. ಸದರಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಯಾವುದೇ ಅಧಿಕಾರಿಗಳು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವುದನ್ನು ಸಮಿತಿಯ ಸದಸ್ಯರು ಪರಿಗಣಿಸಿ, ಇವರ ಮೇಲೆ ಕ್ರಮಕೈಗೊಳ್ಳಬೇಕೆಂದು ಮಾನ್ಯ ಜಂಟಿ ಆಯುಕ್ತರು ರವರ ಗಮನಕ್ಕೆ ತರಲು ಸೂಚಿಸಿದೆ.

ಕ್ರಮ: ಸ.ಕಾ.ಅ ಬಿ.ಡ್ಲ್ಯೂ.ಎಸ್.ಎಸ್.ಬಿ

7. ವರ್ತೂರು ವ್ಯಾಪ್ತಿಯಲ್ಲಿ ವರ್ತೂರು ಕೆರೆಯ ಹತ್ತಿರ, ವರ್ತೂರು ಹೊಸಹಳ್ಳಿ, ಹಾಗೂ ಮಧುರಾನಗರ ಮತ್ತು ವರ್ತೂರಿನ ಬಡಾವಣೆಗಳಲ್ಲಿ ಪಾಲಿಕೆ ವತಿಯಿಂದ ಕೊರೆದಿರುವ ಕೊಳವೆ ಬಾವಿಗಳಿಗೆ ಕೂಡಲೇ ಪಂಪು ಮತ್ತು ಮೋಟರ್‌ಗಳನ್ನು ಅಳವಡಿಸಿರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಹಾಗೂ ಪೈಪ್ ಲೈನ್ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಹಾಗೂ ನೀರಿನ ಭವಣೆ ಇರುವ ಕಡೆ ನೀರು ಸರಬರಾಜಿಗಾಗಿ ಕೊಳವೆ ಸಾಲು/ಪೈಪ್‌ಗಳನ್ನು ಅಳವಡಿಸಲು ವಾರ್ಡ್ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

8. ವರ್ತೂರು ಗ್ರಾಮದ ರಾಜಕಾಲುವೆಗಳನ್ನು ಹೂಳು ತುಂಬಿದ್ದು, ಇದನ್ನು ತುರ್ತಾಗಿ ತೆಗೆಸಿ, ನೀರು ಸರಾಗವಾಗಿ ಹರಿಯುವಂತೆ ಸಾರ್ವಜನಿಕರು ಕೋರಿದರು ಹಾಗೂ ರಾಜಕಾಲುವೆ ಮೇಲೆ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿದ್ದು, ಗುಂಜೂರು ಗ್ರಾಮದ 161 ಮತ್ತು 169ರಲ್ಲಿ ಇರುವ ರಾಜಕಾಲುವೆಯು ಒತ್ತುವರಿಯಾಗಿರುವ ಬಗ್ಗೆ ತುರ್ತಾಗಿ ಸರ್ವೆ ಮಾಡಿಸಿತೆರವುಗೊಳಿಸುವುದು, ರಾಜಕಾಲುವೆ ಸಮಸ್ಯೆಯನ್ನು ತುರ್ತಾಗಿ ಚರ್ಚಿಸಿ, ವಾರ್ಡ್ ಅಭಿಯಂತರರ ಜೊತೆಯಲ್ಲಿ ಸ್ಥಳ ಪರಿಶೀಲಿಸಲು ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು/ ಸ.ಕಾ.ಅ ಬೃ.ನೀ.ಗಾ

9. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಮೀನುಗಳ ಒತ್ತುವರಿಗಳನ್ನು ತೆರವುಗೊಳಿಸಲು ಹಾಗೂ ಸರ್ಕಾರಿ ಜಮೀನುಗಳ ಸರ್ವೆ ಮಾಡಿಸಲು ಮಾನ್ಯ ತಹಶೀಲ್ದಾರ್, ಕೆ.ಆರ್.ಪುರ, ಬೆಂಗಳೂರು ಪೂರ್ವ ತಾಲ್ಲೂಕು ಹಾಗೂ ಉಪ ತಹಶೀಲ್ದಾರ್, ನಾಡಕಛೇರಿ ವರ್ತೂರು ಅಧಿಕಾರಿಗಳಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು

10. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿಗಳ ಪೈಕಿ ವರ್ತೂರು, ಗುಂಜೂರು, ಬಳಗೆರೆ, ಪಣತ್ತೂರು, ಸೋರಹುಣಸೆ, ಚಿಕ್ಕಬೆಳ್ಳಂದೂರು ಗ್ರಾಮಗಳಲ್ಲಿ ಒಳಚರಂಡಿಗಾಗಿ ಅಗೆದಿರುವ ರಸ್ತೆಗಳನ್ನು ಪುನಜೀವನಗೊಳಿಸುವುದು ಹಾಗೂ ಅಭಿವೃದ್ಧಿಗೊಳಿಸಲು ಅನುದಾನ ಮಂಜೂರಾಗಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರೀಯೆಯನ್ನು ಮಾಡಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಲಾಯಿತು. 15ನೇ ಹಣಕಾಸು ಯೋಜನೆಯಡಿ ಕುಡಿಯುವ ನೀರಿಗಾಗಿ ಮಂಜೂರಾಗಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲು ಹಾಗೂ ಅಧ್ಯತೆಯ ಅನುಸಾರ ಬೋರ್‌ವೆಲ್ ಕೊರೆಯುವುದು, ಪೈಪ್ ಲೈನ್ ಅಳವಡಿಕೆ, ಪಂಪು ಮೋಟರ್ ಅಳವಡಿಕೆ, ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿದೆ.

ಕ್ರಮ: ವಾರ್ಡ್ ಅಭಿಯಂತರರು/ ಸ.ಕಾ.ಅ

**11. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ, ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಆರೋಗ್ಯ ಇಲಾಖೆ, ಬಿ.ಡಿ.ಎ., ಪೋಲೀಸ್ ಇಲಾಖೆ, ಕೆ.ಆರ್.ಡಿ.ಸಿ.ಎಲ್ ನ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸದೆ ಇರುವುದನ್ನು ಮಾನ್ಯ ಜಂಟಿ ಆಯುಕ್ತರು, ರವರ ಗಮನಕ್ಕೆ ತರಲು, ಸೂಕ್ತ ಕ್ರಮ ಜರುಗಿಸಲು ವಾರ್ಡ್ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.**

ಕ್ರಮ: ವಾರ್ಡ್ ಅಭಿಯಂತರರು

ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರು, ಅಧಿಕಾರಿ ನೌಕರರು ಹಾಗೂ ಪಧಾಧಿಕಾರಿಗಳು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ವರ್ತೂರು ವಾರ್ಡ್ ನಂ: 149 ರ ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು/ಕುಡಿಯುವ ನೀರಿನ ಕಾಮಗಾರಿಗಳನ್ನು ಅಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು.

ವರ್ತೂರು ವಾರ್ಡ ನಂ: 149 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ವೈ.ಆರ್.ರಮೇಶ್, ಸಹಾಯಕ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಾರ್ಡ್ ಕಮಿಟಿ ಕಾರ್ಯದರ್ಶಿ**
ವಾರ್ಡ್ ನಂ: 149

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ